Received on 01/09/2020
WUP

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ **ಅಧೀಕ್ಷಕರುಗಳಿಗೆ ಗೆಜೆಟೆಡ್ ಮ್ಯಾನೇಜರ್** ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್ಆರ್ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ : 25.07.2019ರ ಸಂಖ್ಯೆ : ಕಾಶಿಇ/27/ಅಧೀಕ್ಷಕರು/ಜೇಪ/ಬಸ್ಥಾವಿ/2019-20ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ **ಅಧೀಕ್ಷಕರ** ಅಂತಿಮ ಜ್ಯೇಷ್ಠತಾ ಪಟ್ಟಿ.
3. ದಿನಾಂಕ: 15.06.2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.
4. ದಿನಾಂಕ : 20.08.2020 ರ ಸಂಖ್ಯೆ : ಕಾಶಿಇ/15/ ಮ್ಯಾಬಡ್ತಿ/ಬಸ್ಥಾವಿ/2019-20ರ ಜ್ಞಾಪನ.

*****

__ಪ್ರಸ್ತಾವನೆ:__

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **ಗೆಜೆಟೆಡ್ ಮ್ಯಾನೇಜರ್** ಹುದ್ದೆಗಳಿಗೆ **ಅಧೀಕ್ಷಕರ** ಹುದ್ದೆಯಿಂದ ಶೇಕಡ 100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಪತ್ರದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಅಧೀಕ್ಷಕರುಗಳ** ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ **ಗೆಜೆಟೆಡ್ ಮ್ಯಾನೇಜರ್** ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ದಿನಾಂಕ:15.06.2020ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ **ಗೆಜೆಟೆಡ್ ಮ್ಯಾನೇಜರ್** ಹುದ್ದೆಗಳನ್ನು ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಅರ್ಹ **ಅಧೀಕ್ಷಕರುಗಳಿಂದ** ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು.

ಮುಂದುವರೆಯುತ್ತಾ, ದಿನಾಂಕ : 24.07.2020, ಪತ್ರ ಸಂಖ್ಯೆ : ಇಡಿ/76/ಯುಇಸಿ/2020ರಲ್ಲಿ ಸರ್ಕಾರವು ನೀಡಿರುವ ಸೂಚನೆಯಂತೆ , ಕಾಲೇಜು ಶಿಕ್ಷಣ ಇಲಾಖೆಯ ವರ್ಗಾವಣೆ ಕಾಯಿದೆ-2012ರ ಕಲಂ (3)ರ ಉಪಬಂಧ (2)ರನ್ವಯ ವಲಯ-ಸಿ ಯಲ್ಲಿ ಖಾಲಿಯಿರುವ ಗೆಜೆಟೆಡ್ ಮ್ಯಾನೇಜರ್ ಹುದ್ದೆಗಳಿಗೆ ಬಡ್ತಿ ನೀಡಲು ತೀರ್ಮಾನಿಸಲಾಗಿದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ **ಅಧೀಕ್ಷಕರ** ವೃಂದದಿಂದ **ಗೆಜೆಟೆಡ್ ಮ್ಯಾನೇಜರ್** ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ಅಧೀಕ್ಷಕರುಗಳಿಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಉಲ್ಲೇಖ (4)ರ ಜ್ಞಾಪನದಲ್ಲಿ ದಿನಾಂಕ:20.08.2020ರಂದು ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸಲಾಗಿತ್ತು. ಅದರಂತೆ, ದಿನಾಂಕ:24.08.2020ರಂದು ಸ್ಥಳ ಆಯ್ಕೆಗಾಗಿ ನಡೆಸಿದ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ **ಅಧೀಕ್ಷಕರುಗಳಿಗೆ ಗೆಜೆಟೆಡ್ ಮ್ಯಾನೇಜರ್** ಆಗಿ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

DCE 15-MGR PROMOTION 2020-21

ಆದೇಶ ಸಂಖ್ಯೆ: ಕಾಶಿಇ/15/ಮ್ಯಾಬಡ್ತಿ/ಬಸ್ಥಾವಿ/2020-21 ಬೆಂಗಳೂರು, ದಿನಾಂಕ:01.09.2020

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅಧೀಕ್ಷಕರುಗಳಿಗೆ ವೇತನ ಶ್ರೇಣಿ ರೂ.40900-1100-46400-1250-53900-1450-62600-1650-72500-1900-78200 ರಲ್ಲಿ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಗೆಜೆಟೆಡ್ ಮ್ಯಾನೇಜರ್ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಖಾಲಿ ಹುದ್ದೆಗೆ ಎದುರಾಗಿ ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ರಾಜ್ಯವ್ಯಾಪಿ ಉಳಿಕೆ ಮೂಲ ವೃಂದ (ಆರ್.ಕೆ.)

| ಕ್ರ. ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | ಜನಾರ್ಧನರಾಜ್ ಅರಸ್ | ಸರ್ಕಾರಿ ಮಹಿಳಾ ಕಾಲೇಜು, ಸಾಗರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಮಂಗಳೂರು, ಯಲಬುರ್ಗಾ (ತಾ), ಕೊಪ್ಪಳ ಜಿಲ್ಲೆ. | ಖಾಲಿ ಹುದ್ದೆಗೆ ಎದುರಾಗಿ |
| 2 | ರಮೇಶ್ ಬಾಬು.ಎಂ | ಕೇಂದ್ರ ಕಛೇರಿ, ಬೆಂಗಳೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಝಳಕಿ, ಇಂಡಿ ತಾಲ್ಲೂಕು. | ಖಾಲಿ ಹುದ್ದೆಗೆ ಎದುರಾಗಿ |

ಬಡ್ತಿ ಹೊಂದಿರುವ ಗೆಜೆಟೆಡ್ ಮ್ಯಾನೇಜರ್‌ಗಳು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಕಛೇರಿ/ಕಾಲೇಜಿನಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ. ಬಡ್ತಿಗೊಂಡ ನೌಕರರು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.

ಪ್ರಸ್ತುತ ನಿಯೋಜನೆ ಮೇರೆ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರ ನಿಯೋಜನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು – ಮಾಹಿತಿಗಾಗಿ.
2) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯಕ್ರಮಕ್ಕಾಗಿ.
3) ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
4) ಮೇಲ್ಕಂಡ ಅಧೀಕ್ಷಕರುಗಳಿಗೆ (ಸಂಬಂಧಪಟ್ಟ ಮೇಲಾಧಿಕಾರಿ/ಪ್ರಾಂಶುಪಾಲರು ಮೂಲಕ)
5) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು/ಎಲ್ಲಾ ವಿಭಾಗಗಳ ಅಧೀಕ್ಷಕರುಗಳು – ಮಾಹಿತಿಗಾಗಿ.

Received on 01/09/2020
NVP

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ **ಪ್ರಥಮ ದರ್ಜೆ ಸಹಾಯಕರುಗಳಿಗೆ ಅಧೀಕ್ಷಕರ** ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್ಆರ್ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ : 03.08.2019 ರ ಸಂಖ್ಯೆ : ಕಾಶಿಇ/28/ಪ್ರ.ದ.ಸ./ಜೇಪ/ಬಸ್ಥಾವಿ/2019-20ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಪ್ರಥಮ ದರ್ಜೆ ಸಹಾಯಕರುಗಳ** ಅಂತಿಮ ಜ್ಯೇಷ್ಠತಾ ಪಟ್ಟಿ.
3. ದಿನಾಂಕ: 08.07.2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.
4. ದಿನಾಂಕ : 20.08.2020 ರ ಸಂಖ್ಯೆ : ಕಾಶಿಇ/34/ಬಡ್ತಿ/ಬಸ್ಥಾವಿ/2018-19ರ ಜ್ಞಾಪನ.

*****

**ಪ್ರಸ್ತಾವನೆ:**

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **ಅಧೀಕ್ಷಕ** ಹುದ್ದೆಗಳಿಗೆ **ಪ್ರಥಮ ದರ್ಜೆ ಸಹಾಯಕ** ಹುದ್ದೆಯಿಂದ ಶೇಕಡ 100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2) ರ ಪತ್ರದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಪ್ರಥಮ ದರ್ಜೆ** ಸಹಾಯಕರುಗಳ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ **ಅಧೀಕ್ಷಕ** ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ದಿನಾಂಕ:08.07.2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ **ಅಧೀಕ್ಷಕ** ಹುದ್ದೆಗಳನ್ನು ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಅರ್ಹ **ಪ್ರಥಮ ದರ್ಜೆ ಸಹಾಯಕರುಗಳಿಗೆ** ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು.

ಮುಂದುವರೆಯುತ್ತಾ, ದಿನಾಂಕ : 24.07.2020 ರ ಪತ್ರ ಸಂಖ್ಯೆ : ಇಡಿ/76/ಯುಇಸಿ/2020ರಲ್ಲಿ ಸರ್ಕಾರವು ಮ್ಯಾನೇಜರ್ ಹುದ್ದೆಯ ಬಡ್ತಿಗೆ ಸಂಬಂಧಿಸಿದಂತೆ, ನೀಡಿರುವ ಸೂಚನೆಯನ್ನೇ **ಅಧೀಕ್ಷಕ** ಹುದ್ದೆಯ ಬಡ್ತಿಗೂ ಅನ್ವಯಿಸಲು ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ವರ್ಗಾವಣೆ ಕಾಯಿದೆ-2012ರ ಕಲಂ (3)ರ ಉಪಬಂಧ (2)ರನ್ವಯ, ವಲಯ-ಸಿ ಯಲ್ಲಿ ಖಾಲಿಯಿರುವ **ಅಧೀಕ್ಷಕ** ಹುದ್ದೆಗಳಿಗೆ ಬಡ್ತಿ ನೀಡಲು ತೀರ್ಮಾನಿಸಲಾಗಿದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ **ಪ್ರಥಮ ದರ್ಜೆ ಸಹಾಯಕ** ವೃಂದದಿಂದ **ಅಧೀಕ್ಷಕ** ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ **ಪ್ರಥಮ ದರ್ಜೆ ಸಹಾಯಕರುಗಳಿಗೆ** ಸ್ಥಳ ಆಯ್ಕೆ ಮಾಡಿಕೊಳ್ಳಲು ಉಲ್ಲೇಖ (4)ರ ಜ್ಞಾಪನದಲ್ಲಿ ದಿನಾಂಕ:20.08.2020

ರಂದು ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸಲಾಗಿತ್ತು. ಅದರಂತೆ, ದಿನಾಂಕ:26.08.2020ರಂದು ಸ್ಥಳ ಆಯ್ಕೆಗಾಗಿ ನಡೆಸಿದ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ **ಪ್ರಥಮ ದರ್ಜೆ ಸಹಾಯಕರುಗಳಗೆ ಅಧೀಕ್ಷಕರಾಗಿ** ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ: ಕಾಶಿಇ/16/ಅಧೀಕ್ಷಕ/ಬಡ್ತಿ/ಬಸ್ಥಾವಿ/2020-21, ಬೆಂಗಳೂರು, ದಿನಾಂಕ:01.09.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ **ಪ್ರಥಮ ದರ್ಜೆ ಸಹಾಯಕರುಗಳಗೆ** ವೇತನ ಶ್ರೇಣಿ *ರೂ. 37900-950-39800-1100-46400-1250-53900-1450-62600-1650-70850* ರಲ್ಲಿ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ **ಅಧೀಕ್ಷಕ** ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಖಾಲಿ ಹುದ್ದೆಗೆ ಎದುರಾಗಿ ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಸಲಾಗಿದೆ.

**<u>ರಾಜ್ಯವ್ಯಾಪಿ ಉಳಕೆ ಮೂಲ ವೃಂದ (ಆರ್.ಕೆ.)</u>**

| ಕ್ರ. ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | ಮಹದೇವಸ್ವಾಮಿ.ಎಂ | ಸಪ್ರದಕಾ, ಆಲೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್‌ಪೇಟೆ. | ಖಾಲಿ ಹುದ್ದೆಗೆ ಎದುರಾಗಿ |
| 2 | ಹರ್ಷ | ಸಪ್ರದಕಾ, ತ್ಯಾಮಗೊಂಡ್ಲು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯಡ್ಕ | ಖಾಲಿ ಹುದ್ದೆಗೆ ಎದುರಾಗಿ |
| 3 | ಸುಮಂಗಲಾ ಜೆ. ಆಚಾರ್ಯ | ಸಪ್ರದಕಾ, ಕಾವೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುಂಜಾಲಕಟ್ಟೆ | ಖಾಲಿ ಹುದ್ದೆಗೆ ಎದುರಾಗಿ |
| 4 | ಪ್ರಕಾಶ್ ವಿ. ಜಮ್ಮನಕಟ್ಟಿ | ಮಮವಿಕಾ, ಮೈಸೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಪೋಕ್ಲು. | ಖಾಲಿ ಹುದ್ದೆಗೆ ಎದುರಾಗಿ |
| 5 | ಅಶೋಕ್ ಕುಮಾರ್ ಎಂ.ಜಿ | ಸಪ್ರದಕಾ, ಹಳ್ಳಿಮೈಸೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಳುವಳ್ಳಿ. | ಖಾಲಿ ಹುದ್ದೆಗೆ ಎದುರಾಗಿ |
| 6 | ರಂಗನಾಥ.ಕೆ.ಆರ್. | ಸಪ್ರದಕಾ, ಕಾಡುಗೋಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆರೂರು. | ಖಾಲಿ ಹುದ್ದೆಗೆ ಎದುರಾಗಿ |
| 7 | ಇಮ್ರಾನ್ ಪಾಷ | ಸಪ್ರದಕಾ, ಹನೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾವಳಗಿ | ಖಾಲಿ ಹುದ್ದೆಗೆ ಎದುರಾಗಿ |
| 8 | ರಘು ಎಂ.ಎಸ್ | ಸಪ್ರದಕಾ, ಹುಳಯಾರ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಗೇರಿ. | ಖಾಲಿ ಹುದ್ದೆಗೆ ಎದುರಾಗಿ |

| | | | | |
|---|---|---|---|---|
| ೯ | ಶ್ರೀವಾಣಿ.ಬಿ | ಸಪ್ರದಕಾ, ಭಾರತೀನಗರ, ಮದ್ದೂರು (ತಾ), ಮಂಡ್ಯ ಜಿಲ್ಲೆ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಗಾವಿ. | ಖಾಲಿ ಹುದ್ದೆಗೆ ಎದುರಾಗಿ |
| 10 | ನಂದವರಿಕ್.ಜಿ.ಆರ್ | ಸಮಕಾ, ಚಿತ್ರದುರ್ಗ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ. | ಖಾಲಿ ಹುದ್ದೆಗೆ ಎದುರಾಗಿ |
| 11 | ರವಿಕುಮಾರ್.ಪಿ | ಶ್ರೀಮತಿ.ವಿಹೆಚ್‌ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲೋಕಾಪುರ. | ಖಾಲಿ ಹುದ್ದೆಗೆ ಎದುರಾಗಿ |
| 12 | ಮಾಯಾರತ್ನ | ಮಮವಿಕಾ, ಬೆಂಗಳೂರು | ಸರ್ಕಾರಿ ಮಹಿಳಾ ಕಾಲೇಜು, ಯಡಹಳ್ಳಿ. | ಖಾಲಿ ಹುದ್ದೆಗೆ ಎದುರಾಗಿ |

ಬಡ್ತಿ ಹೊಂದಿರುವ ಪ್ರಥಮ ದರ್ಜೆ ಸಹಾಯಕರುಗಳು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಕಾಲೇಜಿನಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯನ್ನು ರದ್ದುಪಡಿಸಲಾಗುವುದು. ಬಡ್ತಿಗೊಂಡ ನೌಕರರು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.

ಪ್ರಸ್ತುತ ನಿಯೋಜನೆ ಮೇರೆ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರ ನಿಯೋಜನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2) ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಮೇಲ್ಕಂಡ ಎಲ್ಲಾ ಪ್ರಥಮ ದರ್ಜೆ ಸಹಾಯಕರುಗಳಿಗೆ (ಸಂಬಂಧಪಟ್ಟ ಮೇಲಾಧಿಕಾರಿ/ಪ್ರಾಂಶುಪಾಲರ ಮೂಲಕ)
4) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು/ಎಲ್ಲಾ ವಿಭಾಗಗಳ ಅಧೀಕ್ಷಕರುಗಳು – ಮಾಹಿತಿಗಾಗಿ.